MOBILE
FRIENDLY
EDITION

ರಮದಾನ್

ಕೆಲವು ಫತ್ವಾಗಳು

SUFFAH

SUFFAH PUBLICATIONS
Krishnapura, Suratkal, Mangalore - 575014
8722695551 / 9008662269

© ALL RIGHTS RESERVED

no part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the author

ಈ ಲೇಖನದ ಮುದ್ರಿತ ಪ್ರತಿಗಾಗಿ ಸಂಪರ್ಕಿಸಿ



SUFFAH PUBLICATIONS

Skyway Complex, 6th Block, Krishnapura,
Suratkal, Mangalore - 575 014

8722695551 / 9008662269

ರಮದಾನ್ ಕೆಲವು ಫತ್ವಾಗಳು

ರಮದಾನ್ ತಿಂಗಳನ್ನು ಗುರುತಿಸಲು ಕ್ಯಾಲೆಂಡರ್ ಅವಲಂಬಿಸಬಹುದೇ?

ಸಹೀಹ್ ಹದೀಸ್‌ಗಳ ಪ್ರಕಾರ ರಮದಾನ್ ತಿಂಗಳನ್ನು ಗುರುತಿಸಲು ಚಂದ್ರದರ್ಶನವನ್ನು ಅವಲಂಬಿಸುವುದು ಅಥವಾ ಶಅಬಾನ್ ತಿಂಗಳ ಮೂವತ್ತು ದಿನಗಳು ಪೂರ್ಣವಾಗುವುದು ಕಡ್ಡಾಯವಾಗಿದೆ. ಹಾಗಾದರೆ ರಮದಾನ್ ತಿಂಗಳನ್ನು ಮತ್ತು ಈದ್ ದಿನವನ್ನು ಗುರುತಿಸಲು ಕ್ಯಾಲೆಂಡರನ್ನು ಅವಲಂಬಿಸುವುದು ತಪ್ಪೇ?

ಉತ್ತರ: ರಮದಾನ್ ತಿಂಗಳನ್ನು ಆರಂಭಿಸಲು ಮತ್ತು ಕೊನೆಗೊಳಿಸಲು ಕ್ಯಾಲೆಂಡರನ್ನು ಅವಲಂಬಿಸಬಾರದು. ಏಕೆಂದರೆ, ಅದು ಸಹೀಹ್ ಹದೀಸ್‌ಗಳಿಗೆ ವಿರುದ್ಧವಾಗಿದೆ. ಈ ವಿಷಯದಲ್ಲಿ ಚಂದ್ರದರ್ಶನವನ್ನು ಮಾತ್ರ ಅವಲಂಬಿಸತಕ್ಕದ್ದು.

ಪ್ರವಾದಿ(ﷺ) ರವರು ಹೇಳುತ್ತಾರೆ: "ಚಂದ್ರನನ್ನು ಕಾಣುವ ತನಕ ಉಪವಾಸ ಆರಂಭಿಸಬೇಡಿ ಮತ್ತು ಚಂದ್ರನನ್ನು ಕಾಣುವ ತನಕ ಉಪವಾಸವನ್ನು ಕೊನೆಗೊಳಿಸಬೇಡಿ. ಮೋಡಗಳಿಂದಾಗಿ ನಿಮಗೆ ಚಂದ್ರನನ್ನು ನೋಡಲಾಗದಿದ್ದರೆ ಮೂವತ್ತು ದಿನಗಳನ್ನು ಪೂರ್ಣಗೊಳಿಸಿ." (ಅಲ್-ಬುಖಾರಿ ಮತ್ತು ಮುಸ್ಲಿಮ್)

ಪ್ರವಾದಿ(ﷺ)ರವರು ಹೇಳುತ್ತಾರೆ: "ನಾವು ಅನಕ್ಷರಸ್ಥ ಸಮುದಾಯದವರು. ನಾವು ಬರೆಯುವುದೋ ಲೆಕ್ಕ ಮಾಡುವುದೋ ಇಲ್ಲ. ತಿಂಗಳು ಎಂದರೆ ಈ ರೀತಿ, ಈ ರೀತಿ, ಈ ರೀತಿ." (ಅಲ್-ಬುಖಾರಿ ಮತ್ತು ಮುಸ್ಲಿಮ್)

ಅವರು ಮೂರನೆ ಬಾರಿ ಹೇಳುವಾಗ ತಮ್ಮ ಹೆಬ್ಬೆರಳನ್ನು ಮಡಚಿದರು. ಅಂದರೆ ತಿಂಗಳು ಇಪ್ಪತ್ತೊಂಬತ್ತು ದಿನಗಳು ಅಥವಾ ಮೂವತ್ತು ದಿನಗಳಾಗಿರಬಹುದು ಎಂದು ಪ್ರವಾದಿ(ﷺ) ರವರು ತಮ್ಮ ಬೆರಳುಗಳ ಮೂಲಕ ತೋರಿಸಿದರು.

ಪ್ರವಾದಿ(ﷺ) ಹೇಳುತ್ತಾರೆ:

“ಚಂದ್ರನನ್ನು ನೋಡಿದರೆ ಉಪವಾಸ ಆರಂಭಿಸಿರಿ ಮತ್ತು ಚಂದ್ರನನ್ನು ನೋಡಿದರೆ ಉಪವಾಸ ಕೊನೆಗೊಳಿಸಿರಿ. ಮೋಡಗಳಿಂದಾಗಿ ನಿಮಗೆ ಚಂದ್ರನನ್ನು ನೋಡಲಾಗದಿದ್ದರೆ ಮೂವತ್ತು ದಿನಗಳನ್ನು ಪೂರ್ಣಗೊಳಿಸಿ.” (ಅಲ್-ಬುಖಾರಿ ಮತ್ತು ಮುಸ್ಲಿಮ್)

ಇವೆಲ್ಲವೂ ಸಹೀಹ್ ಹದೀಸ್‌ಗಳು. ಇವು ವಿಭಿನ್ನ ರೂಪಗಳಲ್ಲಿ ವರದಿಯಾಗಿದ್ದರೂ ಎಲ್ಲವೂ ಒಂದೇ ಅರ್ಥವನ್ನು ಸೂಚಿಸುತ್ತವೆ. ಈ ಹದೀಸ್‌ಗಳು ಸೂಚಿಸುವಂತೆ ಚಂದ್ರದರ್ಶನವನ್ನು ಅಥವಾ ತಿಂಗಳು ಮೂವತ್ತು ದಿನ ಪೂರ್ಣವಾಗುವುದನ್ನು ಅವಲಂಬಿಸಬೇಕು. ಲೆಕ್ಕಾಚಾರಗಳನ್ನು ಅವಲಂಬಿಸಬಾರದು. ಅವಲಂಬನಾರ್ಹ ವಿದ್ವಾಂಸರೆಲ್ಲರೂ ಇದೇ ರೀತಿ ಅಭಿಪ್ರಾಯಪಟ್ಟಿದ್ದಾರೆ.

ಪ್ರಯಾಣದಲ್ಲಿರುವವರು ಫಿತ್ರ್ ಝಕಾತನ್ನು ಏನು ಮಾಡಬೇಕು?

ವಿದೇಶದಲ್ಲಿರುವವರು ಫಿತ್ರ್ ಝಕಾತನ್ನು ಊರಿನಲ್ಲಿರುವ ಬಡವರಿಗೆ ನೀಡಬೇಕೇ ಅಥವಾ ವಿದೇಶದಲ್ಲಿರುವವರಿಗೆ ನೀಡಬಹುದೇ? ಈದ್‌ಗೆ

ಮೂರು ದಿನ ಮೊದಲು ಪ್ರಯಾಣ ಹೊರಟರೆ ಫಿತ್ರ್ ಝಕಾತನ್ನು ಏನು ಮಾಡಬೇಕು?

ಉತ್ತರ: ಸುನ್ನತ್ತಿನ ಪ್ರಕಾರ ಫಿತ್ರ್ ಝಕಾತನ್ನು ಈದ್ ದಿನದಂದು ಬೆಳಗ್ಗೆ ಊರಿನಲ್ಲಿರುವ ಬಡಬಗ್ಗರಿಗೆ ನೀಡಬೇಕು. ಈದ್ ದಿನಕ್ಕಿಂತ ಒಂದು ಅಥವಾ ಎರಡು ದಿನ ಮೊದಲು, ಅಂದರೆ ಇಪ್ಪತ್ತೆಂಟನೇ ದಿನದಿಂದ ಇದನ್ನು ನೀಡಬಹುದು. ಅದರಲ್ಲಿ ಯಾವುದೇ ತೊಂದರೆಯಿಲ್ಲ.

ಫಿತ್ರ್ ಝಕಾತ್ ಕಡ್ಡಾಯವಿರುವವರು ಈದ್ ದಿನಕ್ಕಿಂತ ಎರಡು ಅಥವಾ ಹೆಚ್ಚು ದಿನ ಮೊದಲು



ಪ್ರಯಾಣ ಹೊರಟರೆ ಅವರು ಪ್ರಯಾಣ ಮಾಡುವ ಮುಸ್ಲಿಮ್ ದೇಶಗಳಲ್ಲಿ ಫಿತ್ರ್ ಝಕಾತ್ ನೀಡಬೇಕು. ಅದು ಮುಸ್ಲಿಮ್ ದೇಶ ಅಲ್ಲದಿದ್ದಲ್ಲಿ ಅಲ್ಲಿರುವ ಮುಸ್ಲಿಮರನ್ನು ಹುಡುಕಿ ಅವರಿಗೆ ಫಿತ್ರ್ ಝಕಾತ್ ನೀಡಬೇಕು.

ಪ್ರಯಾಣ ಹೊರಡುವುದು ಇಪ್ಪತ್ತೆಂಟನೇ ದಿನ ಅಥವಾ ಅದರ ನಂತರವಾದರೆ ಊರಿನಲ್ಲಿರುವ ಬಡವರಿಗೇ ಅದನ್ನು ನೀಡಬೇಕು. ಏಕೆಂದರೆ, ಫಿತ್ರ್ ಝಕಾತಿನ ಉದ್ದೇಶ ಈದ್‌ನ ದಿನ ಮುಸಲ್ಮಾನರು ಹಸಿವಿನಿಂದ ಇತರರ ಮುಂದೆ ಕೈ ಚಾಚದಂತೆ ಅವರಿಗೆ ಸಹಾಯ ಮಾಡುವುದಾಗಿದೆ.

ಈದ್ ನಮಾಝ್‌ನ ವಿಧಿ

ಈದ್ ನಮಾಝ್‌ನ ವಿಧಿಯೇನು?

ಈದ್ ನಮಾಝ್ ಫರ್ದ್ ಕಿಫಾಯ (ಸಾಮಾಜಿಕ ಬಾಧ್ಯತೆ) ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಸಮಾಜದ ಕೆಲವು ಸದಸ್ಯರು ಅದನ್ನು ನಿರ್ವಹಿಸಿದರೆ ಉಳಿದವರು ತಪ್ಪಿತಸ್ಥರಾಗುವುದಿಲ್ಲ. ಆದರೆ ಸಮಾಜದಲ್ಲಿರುವ ಯಾರೂ ಅದನ್ನು ನಿರ್ವಹಿಸದಿದ್ದರೆ ಎಲ್ಲರೂ ತಪ್ಪಿತಸ್ಥರಾಗುತ್ತಾರೆ.

ಆದರೆ ಈದ್ ನಮಾಝ್‌ಗೆ ಹಾಜರಾಗುವುದು ಮತ್ತು

ಮುಸ್ಲಿಮ್ ಸಹೋದರರೊಡನೆ ಪ್ರಾರ್ಥನೆಯಲ್ಲಿ ಭಾಗಿಯಾಗುವುದು ಪ್ರಬಲ ಸುನ್ನತ್ ಆಗಿದೆ. ಧರ್ಮಸಮ್ಮತ ರಿಯಾಯಿತಿಯಿಲ್ಲದೆ ಅದನ್ನು ಬಿಟ್ಟುಬಿಡುವುದು ಸರಿಯಲ್ಲ.

ಕೆಲವು ವಿದ್ವಾಂಸರ ಅಭಿಪ್ರಾಯ ಪ್ರಕಾರ ಈದ್ ನಮಾಝ್ ಜುಮುಅ ನಮಾಝಿನಂತೆ ಫರ್ದ್ ಐನ್ (ವೈಯುಕ್ತಿಕ ಬಾಧ್ಯತೆ) ಆಗಿದೆ. ಅಂದರೆ ಅದು ಪ್ರತಿಯೊಬ್ಬರ ಮೇಲೂ ಕಡ್ಡಾಯವಾಗಿದೆ.

ಧರ್ಮ ನಿಯಮವನ್ನು ಪಾಲಿಸಲು ಬದ್ಧರಾಗಿರುವ, ಸ್ವತಂತ್ರರಾದ, ಊರಿನಲ್ಲಿರುವ ಪುರುಷರು ಅದನ್ನು ತಪ್ಪಿಸಬಾರದು. ಪುರಾವೆಗಳ ಆಧಾರದಲ್ಲಿ ಈ ಅಭಿಪ್ರಾಯವು ಸ್ಪಷ್ಟ ಮತ್ತು ಸರಿಯಾಗಿದೆ.

ಮಹಿಳೆಯರು ಕೂಡ ಈದ್ ನಮಾಝ್‌ನಲ್ಲಿ ಪಾಲ್ಗೊಳ್ಳುವುದು ಸುನ್ನತ್ತಾಗಿದೆ. ಆದರೆ ಅವರು ಹಿಜಾಬ್ ಧರಿಸಬೇಕು. ಸುಗಂಧ ಹಚ್ಚಬಾರದು.

ಅಲ್-ಬುಖಾರಿ ಮತ್ತು ಮುಸ್ಲಿಮ್‌ನಲ್ಲಿರುವ ಹದೀಸಿನಲ್ಲಿ ಉಮ್ಮು ಅತಿಯ್ಯ(رضي الله عنها) ಹೇಳುತ್ತಾರೆ:

“ಎರಡು ಈದ್ ಹಬ್ಬಗಳಲ್ಲಿ ತರುಣಿಯರನ್ನು ಮತ್ತು ಮುಟ್ಟಾಗಿರುವ ಮಹಿಳೆಯರನ್ನು ಈದ್ಗಾಹ್‌ಗೆ ಒಯ್ದು ಅವರು ಒಳಿತಿನಲ್ಲಿ ಮತ್ತು ಮುಸ್ಲಿಮರ ಪ್ರಾರ್ಥನೆಯಲ್ಲಿ ಭಾಗಿಯಾಗುವಂತೆ ಮಾಡಬೇಕೆಂದು ನಮಗೆ ಆಜ್ಞಾಪಿಸಲಾಗಿದೆ. ಆದರೆ ಮುಟ್ಟಾಗಿರುವ ಮಹಿಳೆಯರು ನಮಾಝ್‌ನ ಸ್ಥಳದಿಂದ ದೂರವಿರಬೇಕು.”

ಇತರ ಕೆಲವು ವರದಿಗಳಲ್ಲಿ:

ಆಗ ಅವರಲ್ಲೊಬ್ಬಳು ಹೇಳಿದಳು: “ಓ ಅಲ್ಲಾಹನ ಸಂದೇಶವಾಹಕರೇ! ಈದ್ಗಾಹ್‌ಗೆ ತೆರಳಲು ನಮ್ಮಲ್ಲಿ ಎಲ್ಲರಿಗೂ ಜಿಲ್ಬಾಬ್ ಇಲ್ಲವಲ್ಲ.” ಆಗ ಪ್ರವಾದಿ(ﷺ) ರವರು ಹೇಳಿದರು: “ಜಿಲ್ಬಾಬ್ ಇಲ್ಲದವಳಿಗೆ ಆಕೆಯ ಸಹೋದರಿ ಒಂದು ಜಿಲ್ಬಾಬ್ ತೊಡಿಸಲಿ.”

ಒಳಿತಿನಲ್ಲಿ ಮತ್ತು ಮುಸ್ಲಿಮರ ಪ್ರಾರ್ಥನೆಯಲ್ಲಿ ಭಾಗಿಯಾಗಲು ಮಹಿಳೆಯರು ಎರಡು ಈದ್ ದಿನಗಳಲ್ಲಿ ಈದ್ಗಾಹ್‌ಗೆ ತೆರಳುವುದು ಪ್ರಬಲ ಸುನ್ನತ್ ಆಗಿದೆಯೆಂದು ಈ ಹದೀಸ್ ಸೂಚಿಸುತ್ತದೆ. ಇದರಲ್ಲಿ ಯಾವುದೇ ಸಂಶಯವಿಲ್ಲ.

ಶವ್ವಾಲ್ ತಿಂಗಳ ಆರು ದಿನಗಳ ಉಪವಾಸ

ಶವ್ವಾಲ್ ತಿಂಗಳ ಆರು ದಿನಗಳ ಉಪವಾಸ ಆಚರಿಸುವುದಕ್ಕೆ ಮೊದಲು ರಮದಾನ್‌ನಲ್ಲಿ ಬಿಟ್ಟುಹೋದ ಉಪವಾಸಗಳನ್ನು ಕರ್ಝಾ ನಿರ್ವಹಿಸಬೇಕೇ?

ಉತ್ತರ: ಧರ್ಮನಿಯಮದ ಪ್ರಕಾರ ರಮದಾನ್‌ನಲ್ಲಿ ಬಿಟ್ಟುಹೋದ ಉಪವಾಸಗಳನ್ನು ಮೊದಲು ಕರ್ಝಾ ನಿರ್ವಹಿಸಬೇಕು. ಏಕೆಂದರೆ, ಪ್ರವಾದಿ(ﷺ) ರವರು ಹೇಳುತ್ತಾರೆ:

"ರಮದಾನ್ ತಿಂಗಳ ಉಪವಾಸವನ್ನು ಆಚರಿಸಿ, ನಂತರ ಶವ್ವಾಲ್ ತಿಂಗಳ ಆರು ಉಪವಾಸಗಳೊಂದಿಗೆ ಅದನ್ನು ಹಿಂಬಾಲಿಸಿದರೆ ವರ್ಷಪೂರ್ತಿ ಉಪವಾಸ ಆಚರಿಸಿದ ಪುಣ್ಯ ಸಿಗುತ್ತದೆ." (ಮುಸ್ಲಿಂ)

ಆರು ದಿನಗಳ ಉಪವಾಸ ರಮದಾನ್ ತಿಂಗಳ ಉಪವಾಸದ ಬಳಿಕ ಆಗಿರಬೇಕೆಂದು ಪ್ರವಾದಿ(ﷺ) ರವರು ವಿವರಿಸಿದ್ದಾರೆ. ಆದ್ದರಿಂದ ಈ ಹದೀಸಿನ ಪ್ರಕಾರ ಶವ್ವಾಲ್ ತಿಂಗಳ ಆರು ಉಪವಾಸಗಳು ನಷ್ಟವಾದರೂ ಸಹ, ರಮದಾನ್ ತಿಂಗಳ ಬಿಟ್ಟುಹೋದ ಉಪವಾಸಗಳನ್ನು ಮೊದಲು ಕಝಾ ನಿರ್ವಹಿಸಲು ಆತುರಪಡುವುದು ಕಡ್ಡಾಯವಾಗಿದೆ. ಕಾರಣ, ಸುನ್ನತ್‌ಗಿಂತಲೂ ಫರ್ದ್‌ಗೆ ಪ್ರಾಶಸ್ತ್ಯ ನೀಡಬೇಕು.

ಲೈಲತುಲ್ ಕದ್ರ್

ಲೈಲತುಲ್ ಕದ್ರನ್ನು ಕಣ್ಣಿಂದ ನೋಡಲು ಸಾಧ್ಯವೇ? ಅಂದರೆ ಮನುಷ್ಯನ ನಗ್ನ ನೇತ್ರಗಳಿಂದ ಅದನ್ನು ನೋಡಲು ಸಾಧ್ಯವೇ? ಕೆಲವು ಜನರು, "ಮನುಷ್ಯನಿಗೆ ಲೈಲತುಲ್ ಕದ್ರನ್ನು ನೋಡಲು ಸಾಧ್ಯವಾದರೆ ಅವನು ಆಕಾಶದಲ್ಲಿ ಬೆಳಕನ್ನು ಕಾಣುತ್ತಾನೆ" ಎಂದಿತ್ಯಾದಿ ಹೇಳುತ್ತಾರೆ. ಪ್ರವಾದಿ(ﷺ) ರವರು ಮತ್ತು ಸಹಾಬಾಗಳು ಅದನ್ನು ಹೇಗೆ ನೋಡಿದ್ದರು? ತಾನು ಲೈಲತುಲ್ ಕದ್ರನ್ನು ನೋಡಿದ್ದೇನೆಂದು ಒಬ್ಬ ವ್ಯಕ್ತಿಗೆ ತಿಳಿಯುವುದು ಹೇಗೆ? ಲೈಲತುಲ್ ಕದ್ರನ್ನು ನೋಡಲು ಸಾಧ್ಯವಾಗದಿದ್ದರೂ ಆ ರಾತ್ರಿಯ ಪುಣ್ಯ ಮತ್ತು

ಪ್ರತಿಫಲವನ್ನು ಪಡೆಯಲು ಸಾಧ್ಯವೇ? ಪುರಾವೆ ಸಹಿತ ಇದನ್ನು ವಿವರಿಸಬೇಕೆಂದು ಬಯಸುತ್ತೇನೆ.

ಉತ್ತರ: ಅಲ್ಲಾಹು ತೌಫೀಕ್ ನೀಡಿದರೆ ಲೈಲತುಲ್ ಕದ್ರನ್ನು ನೋಡಲು ಸಾಧ್ಯವಿದೆ. ಅಂದರೆ ಅದರ ಚಿಹ್ನೆಗಳನ್ನು ನೋಡುವ ಮೂಲಕ. ಸಹಾಬಾಗಳು ಅನೇಕ ಚಿಹ್ನೆಗಳ ಮೂಲಕ ಅದಕ್ಕೆ ಪುರಾವೆ ತೋರಿಸುತ್ತಿದ್ದರು. ಆದರೆ ಲೈಲತುಲ್ ಕದ್ರನ್ನು ನೋಡಲಿಲ್ಲವೆಂಬ ಕಾರಣದಿಂದ ಆ ರಾತ್ರಿಯಲ್ಲಿ ವಿಶ್ವಾಸ ಮತ್ತು ಪ್ರತಿಫಲಾಪೇಕ್ಷೆಯಿಂದ ನಮಾಝ್ ಮಾಡುವವರಿಗೆ ಅದರ ಶ್ರೇಷ್ಠತೆಯು ನಷ್ಟವಾಗುವುದಿಲ್ಲ.

ಪ್ರವಾದಿ(ﷺ) ರವರು ಅವರ ಸಹಾಬಾಗಳಿಗೆ ಆಜ್ಞಾಪಿಸಿದಂತೆ ಮುಸಲ್ಮಾನರು ರಮದಾನ್ ತಿಂಗಳ ಕೊನೆಯ ಹತ್ತರಲ್ಲಿ ಪ್ರತಿಫಲ ಮತ್ತು ಪುಣ್ಯವನ್ನು ಅಪೇಕ್ಷಿಸುತ್ತಾ ಲೈಲತುಲ್ ಕದ್ರನ್ನು ಹುಡುಕಲು ಪರಿಶ್ರಮಿಸಬೇಕು. ಅ ರಾತ್ರಿಯಲ್ಲಿ ವಿಶ್ವಾಸ ಮತ್ತು ಪ್ರತಿಫಲಾಪೇಕ್ಷೆಯಿಂದ ನಮಾಝ್ ಮಾಡುವವರಿಗೆ ಅದರ ಪ್ರತಿಫಲ ಸಿಗುತ್ತದೆ. ಅದು ಲೈಲತುಲ್ ಕದ್ರ್‌ನ ರಾತ್ರಿಯೆಂದು ಅವರಿಗೆ ತಿಳಿಯದಿದ್ದರೂ ಸಹ.

ಪ್ರವಾದಿ(ﷺ) ಹೇಳುತ್ತಾರೆ:

“ಲೈಲತುಲ್ ಕದ್ರ್‌ನ ರಾತ್ರಿ ವಿಶ್ವಾಸ ಮತ್ತು ಪ್ರತಿಫಲಾಪೇಕ್ಷೆಯಿಂದ ನಮಾಝ್ ಮಾಡುವವರಿಗೆ

ಅವರ ಗತ ಪಾಪಗಳನ್ನು ಕ್ಷಮಿಸಲಾಗುವುದು.” (ಅಲ್-ಬುಖಾರಿ ಮತ್ತು ಮುಸ್ಲಿಂ)

ಅಲ್-ಬುಖಾರಿ ಮತ್ತು ಮುಸ್ಲಿಂ ಅಲ್ಲದ ಬೇರೆ ಗ್ರಂಥದಲ್ಲಿರುವ ವರದಿಯಲ್ಲಿ ಹೀಗಿದೆ:

“ಆ ರಾತ್ರಿಯನ್ನು ಹುಡುಕುತ್ತಾ ನಮಾಝ್ ಮಾಡುವವರಿಗೆ ಆ ರಾತ್ರಿ ಸಿಕ್ಕಿದರೆ ಅವರ ಗತ ಮತ್ತು ಮುಂಬರುವ ಪಾಪಗಳನ್ನು ಕ್ಷಮಿಸಲಾಗುವುದು.” (ಅಹ್ಮದ್)

ಆ ದಿನ ಬೆಳಗ್ಗೆ ಸೂರ್ಯನು ಕಿರಣಗಳಿಲ್ಲದೆ ಉದಯವಾಗುವುದು ಆ ರಾತ್ರಿಯ ಚಿಹ್ನೆಯೆಂದು ಪ್ರವಾದಿ(ﷺ) ರವರು ಹೇಳಿದ್ದಾಗಿ ವರದಿಯಾಗಿದೆ. ಅದು ಇಪ್ಪತ್ತೇಳನೇ ರಾತ್ರಿಯೆಂದು ಉಬೈ ಇಬ್ನ್ ಕಅಬ್(ﷺ) ಆಣೆಹಾಕಿ ಹೇಳುತ್ತಿದ್ದರು. ಅವರು ಅದಕ್ಕೆ ಈ ಚಿಹ್ನೆಯನ್ನು ಪುರಾವೆಯಾಗಿ ತೋರಿಸುತ್ತಿದ್ದರು.

ಆದರೆ ಪ್ರಬಲ ಅಭಿಪ್ರಾಯದ ಪ್ರಕಾರ ಆ ರಾತ್ರಿ ಕೊನೆಯ ಹತ್ತರಲ್ಲಿ ಬದಲಾಗುತ್ತಾ ಇರುತ್ತದೆ. ವಿಶೇಷವಾಗಿ ಬೆಸ ಸಂಖ್ಯೆಯ ರಾತ್ರಿಗಳಲ್ಲಿ. ಇಪ್ಪತ್ತೇಳನೇ ರಾತ್ರಿ ಬೆಸ ಸಂಖ್ಯೆಯಲ್ಲಿರುವುದರಿಂದ ಲೈಲತುಲ್ ಕದ್ರ್ ಆಗಿರುವ ಸಾಧ್ಯತೆ ಹೆಚ್ಚಿದೆ.

ಎಲ್ಲ ಹತ್ತು ರಾತ್ರಿಗಳಲ್ಲೂ ನಮಾಝ್, ಕುರ್‌ಆನ್ ಪಾರಾಯಣ, ಪ್ರಾರ್ಥನೆ ಇತ್ಯಾದಿ ಒಳಿತಿನ ಕಾರ್ಯಗಳಲ್ಲಿ ತಲ್ಲೀನರಾಗುವವರು ಲೈಲತುಲ್

ಕದ್ರನ್ನು ಪಡೆದೇ ತೀರುವವರು ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಅಂದರೆ ಅವರು ವಿಶ್ವಾಸ ಮತ್ತು ಪ್ರತಿಫಲಾಪೇಕ್ಷೆಯಿಂದ ನಮಾಝ್ ಮಾಡಿದ್ದರೆ ಅಲ್ಲಾಹು ವಾಗ್ದಾನ ಮಾಡಿದ್ದನ್ನು ಅವರು ಪಡೆಯುವವರು.

ಓದುಗರಲ್ಲಿ ವಿನಂತಿ

ಈ ಲೇಖನವು ನಿಮಗೆ ಇಷ್ಟವಾದರೆ, ದಯವಿಟ್ಟು ಇದನ್ನು ನಿಮ್ಮ ಗೆಳೆಯರು ಮತ್ತು ಸಂಬಂಧಿಕರಿಗೆ ಫಾರ್ವರ್ಡ್ ಮಾಡಿ



ಈ ಲೇಖನವನ್ನು ಕರಪತ್ರದ ರೂಪದಲ್ಲಿ ಮುದ್ರಿಸಲು ಅಥವಾ ಇಂತಹ ಲೇಖನಗಳನ್ನು ತಯಾರಿಸಿ ಪ್ರಕಟಿಸಲು ಸಂಪರ್ಕಿಸಿ

9972343115

ಕರೆ ಮಾಡಲು ಸಂಖ್ಯೆಯನ್ನು ಒತ್ತಿದರೆ ಸಾಕು - ನಿಮ್ಮ ಫೋನ್ ಸ್ಕ್ರೀನ್ ತೆರೆದುಕೊಳ್ಳುತ್ತದೆ